ದಿನಾಂಕಃ 29-11-2025 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಪಾಟಿಸವಾಲುಃ ಆರೋಪಿತರ ಪರ ಶ್ರೀ.ಎಸ್.ಆರ್.ಕೆ ವಕೀಲರಿಂದ.**

ಪಿರ್ಯಾದಿಯಲ್ಲಿ ಬರೆದ ವಿಷಯ ಗೊತ್ತಿಲ್ಲ. 2 ನೇ ಆರೋಪಿ ಮತ್ತು ಕೊರವರ ಎನ್ನುವ ವ್ಯಕ್ತಿ ಕೊಲೆ ಮಾಡಿದ್ದಾರೆ ಅಂತಾ ಗೊತ್ತಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ಮಗನಿಗೆ ಶ್ರೀಗಂಧದ ಕಟ್ಟಿಗೆಯಿಂದ ಹೊಡೆದು ಕೊಲೆ ಮಾಡಿದ್ದಾರೆ ಎಂದು ಗೊತ್ತಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ದಿನಾಂಕಃ 02-05-2024 ರಂದು ಪೊಲೀಸರು ನ್ಯಾಯಾಲಯದ ಮುಂದಿರುವ 3 ಜನ ಆರೋಪಿತರನ್ನು ದಸ್ತಗಿರಿ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. 2 ನೇ ಆರೋಪಿ ಮಾರುತಿ ಎನ್ನುವವನ ಜೊತೆ ಅನೈತಿಕ ಸಂಬಂಧ ಹೊಂದಿರುವುದು ಮೃತನಿಗೆ ಗೊತ್ತಾಗಿರುವುದರಿಂದ ಅವನು ತೊಂದರೆ ಮಾಡಬಹುದು ಎಂದು 3 ಜನರು ಸೇರಿ ಕೊಲೆ ಮಾಡಿದ್ದಾರೆ ಅಂತಾ ಗೊತ್ತಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ದಿನಾಂಕಃ 29-04-2024 ರಂದು ರಾತ್ರಿ ನಂದವಾಡಗಿ ರಸ್ತೆಯಲ್ಲಿ ಬೈಕ್ ಮೇಲೆ ಮೃತ ಬಸವರಾಜ ಬರುವಾಗ ಹಳ್ಳದ ಬ್ರಿಡ್ಜ ಹತ್ತಿರ ಆರೋಪಿತರು ರಸ್ತೆಗೆ ಅಡ್ಡಲಾಗಿ ಮುಳ್ಳುಕಂಟಿಯನ್ನು ಹಚ್ಚಿದ್ದು, ಮುಳ್ಳುಕಂಟಿ ತೆಗೆಯುವಾಗ ಹಿಂದಿನಿಂದ ಬಂದು 1 ನೇ ಆರೋಪಿ ಕಟ್ಟಿಗೆ ಬಡಿಗೆಯಿಂದ ಅವನ ತಲೆಗೆ ಹೊಡೆದ, ಉಳಿದ ಆರೋಪಿತರೂ ಸಹ ಕಟ್ಟಿಗೆಯಿಂದ ಹೊಡೆದು ಕೊಲೆ ಮಾಡಿ ತಲೆಗೆ ಲುಂಗಿ ಕಟ್ಟಿ ಮೋಟರ್ ಸೈಕಲ್ ಮೇಲಿಂದ ಬಿದ್ದು ಸತ್ತಿದ್ದಾನೆ ಎಂಬಂತೆ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

29-11-2025

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಸಂಚಾರಿ ನ್ಯಾಯಾಲಯ, ಹುನಗುಂದ.